# ಸೋನಂ ಕಪೂರ್ ಮದುವೆ?

ಸೋನಂ ಕಪೂರ್ ಮದುವೆಗೆ ಕ್ಷಣಗಣನೆ ಆರಂಭವಾಗಿದೆ. ಹಾಗೆಂದು ಬಾಲಿವುಡ್ ತುಂಬ ಟಾಂ ಟಾಂ ಆಗುತ್ತಿದೆ. ಏಪ್ರಿಲ್ 29ರಂದು ಮದುವೆ ಆಗುವುದು ಖಚಿತವಂತೆ. ಇನ್ನೊಂದು ವರದಿಯ ಪ್ರಕಾರ ಮೇ 11ಕ್ಕೆ ಮದುವೆ! ಸೋನಂ ಕಪೂರ್ ಮಾತ್ರ ಮದುವೆಯ ಬಗ್ಗೆ ಬಾಯಿ ಬಿಟ್ಟಿಲ್ಲ. ದೆಹಲಿಯ ಉದ್ಯಮಿ, ಸೋನಂಳ ಬಹುಕಾಲದ ಗೆಳೆಯ ಆನಂದ್ ಅಹುಜಾ ಮದುಮಗನಂತೆ. ಆನಂದ್ ಅಹುಜಾ **Bhane** ಎನ್ನುವ ತನ್ನ ಫ್ಯಾಷನ್ ಲೇಬಲ್ ಮೂಲಕ ಬಾಲಿವುಡ್‌ನಲ್ಲಿ ಸಾಕಷ್ಟು ಪರಿಚಿತ.

ಎರಡು ವಾರಗಳ ಹಿಂದೆ ಈ ಮದುವೆಯ ಸುದ್ದಿ ಸ್ಫೋಟಗೊಂಡಾಗ, ಮದುವೆ ನಡೆಯುವುದು ದೂರದ ಸ್ವಿಝರ್ಲ್ಯಾಂಡ್‌ನಲ್ಲಿ ಎಂದು ವರದಿಯಾಗಿತ್ತು. ಆದರೆ ಈ ವಾರ ಬಂದಿರುವ ಸುದ್ದಿಯ ಪ್ರಕಾರ, ಮದುವೆ ನಡೆಯುವುದು ಮುಂಬೈಯ ಪಂಚತಾರಾ ಹೋಟೆಲೊಂದರಲ್ಲಿ. ಸಂಬಂಧಿಕರು, ವಯಸ್ಸಾದವರು ಮುಂತಾಗಿ ಸುಮಾರು 150 ಮಂದಿಯನ್ನು ದೂರದ ಸ್ವಿಝರ್ಲ್ಯಾಂಡ್‌ಗೆ ಕರೆದೊಯ್ಯುವುದು, ಅಲ್ಲಿ ಅವರನ್ನು 3–4 ದಿನಗಳ ಕಾಲ ನೋಡಿಕೊಳ್ಳುವುದು ಎಲ್ಲವೂ ತುಂಬ ಕಷ್ಟದ ಕೆಲಸವಾದ್ದರಿಂದ ಮದುವೆ ಮುಂಬೈಗೆ ಶಿಫ್ಟಾಯಿತು ಎನ್ನುವುದು ವರದಿಗಳ ಸಾರ.

'ಕಳೆದ ತಿಂಗಳಲ್ಲೇ ಸೋನಂ ಮದುವೆಯ ಸುದ್ದಿ ಬಹಿರಂಗ ಆಗಬೇಕಿತ್ತು. ಆದರೆ ಶ್ರೀದೇವಿಯ ಆಕಸ್ಮಿಕ ಮರಣದಿಂದ ದಿನಾಂಕ ಮುಂದಕ್ಕೆ ಹೋಯಿತು. ಈಗ ಬೋನಿ ಕಪೂರ್ ಸ್ವತಃ ಮುಂದೆ ನಿಂತು ತಮ್ಮ ಅನಿಲ್ ಕಪೂರ್‌ಗೆ ಮಗಳ ಮದುವೆ ಇನ್ನು ಮುಂದಕ್ಕೆ ಹಾಕಬೇಡ ಎಂದಿದ್ದಾನಂತೆ' ಎಂದೂ ಹೇಳುವವರಿದ್ದಾರೆ.

ಈ ಮಧ್ಯೆ ತೆರೆಯ ಮೇಲೆ ಸೋನಂ ಕಪೂರ್‌ಳ ಮದುವೆಯೊಂದು ಜೂನ್ 1ರಂದು ನಡೆಯಲಿದೆ. ಅದು 'ವೀರೆ ಡಿ ವೆಡಿಂಗ್' ಎನ್ನುವ ಸಿನಿಮಾದ ಬಿಡುಗಡೆಯ ದಿನಾಂಕ. ವೀರೆ ಡಿ ವೆಡಿಂಗ್ ನಲ್ಲಿ ಈಗಾಗಲೆ ಮದುಮಗಳ ವೇಷಭೂಷಣದಲ್ಲಿ ಸೋನಂ ಮಿಂಚುತ್ತಿರುವ ಚಿತ್ರಗಳು ಸಾಕಷ್ಟು ಪ್ರಕಟವಾಗಿವೆ. ಈ ಹೊಸ ಚಿತ್ರದ ಇನ್ನೊಂದು ವಿಶೇಷವೆಂದರೆ ಸೋನಂ ಜೊತೆಗೆ ಕರೀನಾ ಕಪೂರ್ ನಟಿಸಿರುವುದು. ಬಾಣಂತನ ಮುಗಿಸಿ ಬಂದ ಬಳಿಕ ಕರೀನಾಳ ತೆರೆ ಕಾಣುತ್ತಿರುವ ಮೊದಲ ಚಿತ್ರವಿದು. ಕರೀನಾಳ ಈ ಎರಡನೇ ಎಂಟ್ರಿಯನ್ನು ಪ್ರೇಕ್ಷಕರು ಹೇಗೆ ಸ್ವೀಕರಿಸುತ್ತಾರೆ ಎನ್ನುವ ಕುತೂಹಲವೂ ಎಲ್ಲರಲ್ಲಿದೆ. ಚಿತ್ರದಲ್ಲಿ ಸ್ವರ ಭಾಸ್ಕರ್, ಶಿಖಾ ತಲ್ಸಾನಿಯ ಮತ್ತು ಸುಮೀತ್ ವ್ಯಾಸ್ ಕೂಡಾ ಪ್ರಮುಖ ಪಾತ್ರಗಳಲ್ಲಿ ಇದ್ದಾರೆ. ಈ ವಾರವೇ ಚಿತ್ರದ ಥಿಯೇಟರ್ ಟ್ರೇಲರ್ ಬಿಡುಗಡೆಯಾಗಲಿದೆ.

ಬಾಲಿವುಡ್‌ನಲ್ಲಿ ಅಪ್ಪ ಅನಿಲ್ ಕಪೂರ್‌ನಂತೆಯೇ ಜನಪ್ರಿಳಾಗಿರುವ ಸೋನಂ ನಟಿಸಿರುವ 'ಏಕ್ ಲಡ್ಕೀ ಕೊ ದೇಖಾ ತೋ ಐಸಾ ಲಗಾ' ಎನ್ನುವ ಚಿತ್ರ ಕೂಡಾ ಬಿಡುಗಡೆಗೆ ಸಿದ್ಧವಾಗಿದೆ. ಇದರಲ್ಲಿ ಅಪ್ಪ– ಮಗಳು ಜೊತೆಯಾಗಿ ನಟಿಸಿರುವುದು ವಿಶೇಷ. ಸಂಜಯ್ ದತ್ ಜೀವನ ಆಧಾರಿತ ಇನ್ನೊಂದು ಚಿತ್ರಕ್ಕೂ ಸೋನಂ ಸಹಿ ಹಾಕಿದ್ದಾಳೆ.

■ ಬಿಂದು

